# ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ

**ಬಸವ ಭವನ, ಹೈಗ್ರೌಂಡ್ಸ್, ಬೆಂಗಳೂರು-560001**

ಸಂಖ್ಯೆ: ಕರಾಆ/ಆಡಳಿತ/17/2009 ದಿನಾಂಕ: 28.06.2021

## ಅಧಿಕೃತ ಜ್ಞಾಪನ

ವಿಷಯ: ಕರ್ನಾಟಕ ರಾಜ್ಯದಲ್ಲಿ ಕೊರೋನಾ ವೈರಸ್(ಕೋವಿಡ್-19) ಹರಡುವಿಕೆ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿಗಳನ್ನು ಅನುಸರಿಸಿಕೊಂಡು ರಾಜ್ಯ ಆಯೋಗ ಮತ್ತು ಜಿಲ್ಲಾ ಆಯೋಗಗಳು ಕಾರ್ಯನಿರ್ವಹಿಸುವ ಬಗ್ಗೆ

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 158 ಟಿಎನ್‌ಆರ್ 2020 ದಿನಾಂಕ 19.06.2021.

2. ರಾಜ್ಯ ಆಯೋಗದ ಅಧಿಕೃತ ಜ್ಞಾಪನ ಪತ್ರ ದಿನಾಂಕ 21.06.2021.

-----

ರಾಜ್ಯದಲ್ಲಿ ಕೋವಿಡ್-19 ಪ್ರಮಾಣವು ಕೆಲವು ಜಿಲ್ಲೆಗಳಲ್ಲಿ ಇಳಿಕೆಯಾಗಿ ಸರ್ಕಾರದಿಂದ ಲಾಕ್‌ಡೌನ್ ಮಾರ್ಗಸೂಚಿಗಳು ಸಡಿಲಿಕೆ ಆಗಿರುತ್ತದೆ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿನ ವಿಚಾರಣಾ ನ್ಯಾಯಾಲಯಗಳಿಗೆ ಅನ್ವಯಿಸುವಂತೆ ಪ್ರತ್ಯೇಕ ಮಾರ್ಗಸೂಚಿಗಳನ್ನು ಹೊರಡಿಸಿ ಅದನ್ನು ಅನುಸರಿಸಿಕೊಂಡು ದಿನಾಂಕ 28.06.2021ರಿಂದ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಕ್ರಮವಹಿಸಿರುತ್ತದೆ. ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಹಾಗೂ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಗಳು ನ್ಯಾಯಿಕ ಸ್ವರೂಪದ ಕಾರ್ಯವನ್ನು ನಿರ್ವಹಿಸುತ್ತಿರುವುದರಿಂದ, ಉಲ್ಲೇಖ (2)ರ ಅಧಿಕೃತ ಜ್ಞಾಪನವನ್ನು ಮಾರ್ಪಡಿಸಿ ಜಿಲ್ಲಾ ಆಯೋಗಗಳು ಈ ಕೆಳಕಂಡ ಅಂಶಗಳನ್ನು ಪಾಲಿಸಿಕೊಂಡು ಕಾರ್ಯನಿರ್ವಹಿಸುವಂತೆ ಸೂಚಿಸಿದೆ.

1. ಆಯಾ ದಿನದಂದು 30 ಪ್ರಕರಣಗಳಿಗಿಂತ ಹೆಚ್ಚಿನ ವ್ಯಾಜ್ಯ ಪ್ರಕರಣಗಳನ್ನು ಈಗಾಗಲೇ ನಿಗಧಿಪಡಿಸಿಕೊಂಡಿದ್ದಲ್ಲಿ, ಅದನ್ನು 30-40 ಪ್ರಕರಣಗಳಿಗೆ ಸೀಮಿತಗೊಳಿಸಿಕೊಂಡು ಪೂರ್ವಾಹ್ನ 15-20 ಪ್ರಕರಣಗಳನ್ನು ಹಾಗೂ ಅಪರಾಹ್ನ 15-20 ಪ್ರಕರಣಗಳಂತೆ ನಿಗದಿಪಡಿಸಿ ಅದರಂತೆ ಸಮಯವನ್ನು ನಿಗದಿಪಡಿಸಿಕೊಂಡು ಕಲಾಪವನ್ನು ಜರುಗಿಸುವುದು. ಪ್ರಕರಣಗಳು ಕಡಿಮೆಯಿರುವ ಜಿಲ್ಲಾ ಆಯೋಗಗಳು ಕೋರ್ಟ್‌ಹಾಲ್ ಒಳಗೆ ಸಾಮಾಜಿಕ ಅಂತರವಿರುವ ರೀತಿ ಗರಿಷ್ಟ 8-10 ಪಕ್ಷಕಾರರು / ವಕೀಲರು ಹಾಜರಿರುವ ರೀತಿಯಲ್ಲಿ ವ್ಯವಸ್ಥೆಗೊಳಿಸಿ ಕಲಾಪವನ್ನು ಜರುಗಿಸುವುದು.

2. ಆದಷ್ಟೂ ಪಕ್ಷಕಾರರು / ವಕೀಲರ ಅನುಪಸ್ಥಿತಿಯಲ್ಲಿ ಯಾವುದೇ ಪರಿಣಾಮಕಾರಿ ಆದೇಶವನ್ನು ಹೊರಡಿಸದೇ ಮುಂದೂಡುವುದು. ಆದರೆ 2-5 ವರ್ಷಗಳು ಮೀರಿರುವಂತಹ ಹಾಗೂ ಪ್ರಕರಣವನ್ನು ನಿಗಧಿತ ಕಾಲಾವಧಿಯಲ್ಲಿ ಇತ್ಯರ್ಥಪಡಿಸುವಂತೆ ಘನ ಭಾರತ ಸರ್ವೋಚ್ಚ ನ್ಯಾಯಾಲಯ / ಮಾನ್ಯ ರಾಷ್ಟ್ರೀಯ ಆಯೋಗ / ರಾಜ್ಯ ಆಯೋಗದಿಂದ ಆದೇಶವಿರುವಂತಹ ಪ್ರಕರಣಗಳಿದ್ದಲ್ಲಿ, ಹೆಚ್ಚಿನ ಹಾಗೂ ದೀರ್ಘಕಾಲದ ಸಮಯವನ್ನು ನೀಡದೇ ಪಕ್ಷಕಾರರು/ವಕೀಲರಿಗೆ ಹಾಜರಾಗುವಂತೆ ಸೂಚಿಸಿ, ಯಾವುದೇ ವಿಳಂಬಕ್ಕೆ ಆಸ್ಪದ ನೀಡದಂತೆ ಪ್ರಕರಣಗಳನ್ನು ಶೀಘ್ರವಾಗಿ ನಿಯಮಾನುಸಾರ ಇತ್ಯರ್ಥಪಡಿಸುವ ಬಗ್ಗೆ ಕ್ರಮವಹಿಸುವುದು.

3. ಜಿಲ್ಲಾ ಆಯೋಗದ ಸಿಬ್ಬಂದಿವರ್ಗದವರಿಗೆ ಹಾಜರಾತಿಯಿಂದ ವಿನಾಯಿತಿ ನೀಡಿರುವುದನ್ನು ಹಿಂಪಡೆಯಲಾಗಿದ್ದು, ಎಲ್ಲಾ ಸಿಬ್ಬಂದಿವರ್ಗದವರು ಕರ್ತವ್ಯಕ್ಕೆ ಹಾಜರಾಗಿ ಎಂದಿನಂತೆ ಕಾರ್ಯನಿರ್ವಹಿಸುವುದು.

4. ಆರೋಗ್ಯ ಇಲಾಖೆಯು ಸ್ಪಷ್ಟಪಡಿಸಿರುವ ಕೋವಿಡ್ ಲಕ್ಷಣ ಕಂಡುಬರುವಂತಹ ವ್ಯಕ್ತಿಗಳಿಗೆ ಪ್ರವೇಶವನ್ನು ನಿರ್ಬಂಧಿಸುವುದು ಹಾಗೂ ಕೋವಿಡ್ ಪರೀಕ್ಷೆಗೆ ಒಳಗಾಗುವಂತೆ ಸೂಚಿಸುವುದು.